**Government of Karnataka**
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 104/2018 |

ದಿನಾಂಕ 05-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 3 ಪ್ರಾಸಾಃ 3

| | |
|---|---|
| ಹೆಸರು | ಗೋಕುಲಸಾಬ |
| ತಂದೆಯ ಹೆಸರು | ಕಾಸಿಂಸಾಬ |
| ವಯಸ್ಸು | 45 ವರ್ಷ |
| ಉದ್ಯೋಗ | ಕಟಗರು |
| ವಾಸಸ್ಥಳ | ಕೊತ್ತದೊಡ್ಡಿ ಗ್ರಾಮ ತಾ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿ ಪರಿಚಯ ನನಗೆ ಇರುತ್ತದೆ ಅವನು ಬೇರೆ ಊರಿನವನಾಗಿರುತ್ತಾನೆ. ಚಾಸಾ- 2 ರವರ ಪರಿಚಯ ನನಗೆ ಇರುವುದಿಲ್ಲ. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ:ಪಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಪೋಲಿಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. ಈ ಕೇಸ್ ನ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. ನಿ:ಪಿ-2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ:**

ದಿ: 06-01-2017 ರಂದು ಬೆಳಿಗ್ಗೆ 10-30 ರಿಂದ 11-30 ಗಂಟೆಯವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿ:ಪಿ-2 ರಂತೆ ಗುನ್ನ ಸ್ಥಳದ ಪಂಚನಾಮೆ ಮಾಡಿ ಒಂದು ಹಿಡಿ ಗಾತ್ರದ ಕಲ್ಲನ್ನು ಜಪ್ತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿದ್ದರು ಸಹಿತ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ